Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



Rtn. Dr. Stephanie Urchick
R. I. President



Rtn. MPHF CA Dev Anand
Dist. Governor



Rtn. Judith Mendonca
President

Volume 39 | Issue - 21 | 24th November 2024

## ಕುಟುಂಬ ಸಮ್ಮಿಲನ
## (Family Get Together)

at Chatras Estate, Hosangady

Time : 6.00 pm

## TALENT SHOW

By Rotarians, Anns & Annets



Rtn. Dr. Rajendra Shetty
Asst. Governor



Rtn. Bharath Shetty
Secretary



Rtn. Mahendr Shetty
Zonal Lieutenant



Rtn. Dr. Anulekha Bayari
Bulletin Editor

39th year of Service and Fellowship

# ವಾರದ ಸಭೆಯ ವರದಿ




ತಾರೀಕು 14–11–2024ರ ನಮ್ಮ ಸಾಪ್ತಾಹಿಕ ಸಭೆಯನ್ನು ಶಿವಪ್ರಸಾದ್ ಗ್ರ್ಯಾಂಡ್‌ನ ಸಭಾಂಗಣದಲ್ಲಿ ನಡೆಸಲಾಯಿತು. ಖ್ಯಾತ ರಂಗ ನಿರ್ದೇಶಕರಾದ ರೊ. ಬಿ. ಎಸ್. ರಾಮ ಶೆಟ್ಟಿ ಹಾರಾಡಿಯವರು ವಾರದ ಅತಿಥಿಗಳಾಗಿ ಆಗಮಿಸಿದ್ದು, "ರಂಗಭೂಮಿಯ ಆಸಕ್ತಿ ಮತ್ತು ಅವಕಾಶಗಳ" ಬಗ್ಗೆ ಮಾಹಿತಿ ನೀಡಲು ಆಸಕ್ತರಾಗಿದ್ದರು. ಅತಿಥಿಯನ್ನು ಮತ್ತು ಸದಸ್ಯರನ್ನು ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಆತ್ಮೀಯವಾಗಿ ಸ್ವಾಗತಿಸಿದರು. ರೊ. ನಂದಾ ನಾಯಕ್‌ರವರು ಪ್ರಾರ್ಥನೆಯ ಮೂಲಕ ಸಭೆಗೆ ಚಾಲನೆಯನ್ನು ನೀಡಿದರು. ಹಂಗಾಮಿ ಕಾರ್ಯದರ್ಶಿಯಾಗಿ ರೊ. ವಿವಿಯನ್ ಕ್ರಾಸ್ತಾರವರು ಕಳೆದ ವಾರದ ವರದಿಯನ್ನು ಸಭೆಗೆ ನೀಡಿದರು. ಸ್ನೇಹತ್ವಕ್ಕಾಗಿ ಸ್ಥಾಪಿತವಾದ ರೋಟರಿಯ ಮೂಲ ಉದ್ದೇಶಕ್ಕೆ ಸಂಬಂಧವಿರುವ ವಾರದ ಚಿಂತನೆಯನ್ನು ನೀಡಿದ ರೊ. ಲೋಯಿಸ್ ಕರ್ವಾಲ್ಲೋರವರು "ಸಮಾಜದಲ್ಲಿ ನಾವು ಏಕಾಂಗಿಯಾಗಿ ಬದುಕುವುದಕ್ಕಿಂತ ನೆರೆಹೊರೆಯವರೊಂದಿಗೆ ಹಾಗೂ ಸ್ನೇಹಿತರೊಂದಿಗೆ ಬಾಳನ್ನು ಹಂಚಿಕೊಂಡರೆ ಜೀವನವನ್ನು ಸವೆಸುವ ಬದಲು ಜೀವನವನ್ನು ಸಂಭ್ರಮಿಸಬಹುದು" ಎಂದರು. ರೋಟರಿ ಮಾಹಿತಿಯನ್ನು ನೀಡಿದ ರೊ. ಜಿ. ಶ್ರೀಧರ್ ಶೆಟ್ಟಿಯವರು ನಮ್ಮ ಕ್ಲಬ್ ಹಲವು Major Donors ಮತ್ತು PHF ಗೌರವವನ್ನು ಪಡೆದ ಸದಸ್ಯರನ್ನು ಹೊಂದಿದ್ದರೂ PHF ಗೌರವದ ಸದಸ್ಯರು ಮುಂದೆ ಪ್ರತೀ ವರ್ಷ TRFಗೆ ದೇಣಿಗೆಯನ್ನು ನೀಡುತ್ತಾ ಹೋದಲ್ಲಿ pointsಗಳ ಮುಖಾಂತರ Multiple PHFಗಳನ್ನು ಪಡೆಯಲು ಸಾಧ್ಯ" ಎಂದು, ಎಲ್ಲರೂ ಜಿಲ್ಲಾ ಗವರ್ನರ್‌ರವರ ಅಧಿಕೃತ ಭೇಟಿಯ ಮೊದಲೇ ದೇಣಿಗೆಯನ್ನು ನೀಡಲು ಸೂಚ್ಯವಾಗಿ ತಿಳಿಸಿದರು. ಅತಿಥಿಗಳಾಗಿ ಆಗಮಿಸಿದ್ದ ರೊ. ಬಿ. ಎಸ್. ರಾಮ ಶೆಟ್ಟಿಯವರನ್ನು ಸೊಗಸಾಗಿ ಸಭೆಗೆ ಪರಿಚಯಿಸಿದ ರೊ. ರಮಾನಂದ ಕಾರಂತರವರು "ಸಣ್ಣ ಪ್ರಾಯದಲ್ಲೇ ರಾಜ್ಯ ಪ್ರಶಸ್ತಿ ಹಾಗೂ ರಾಷ್ಟ್ರ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡ ರೊ. ರಾಮ ಶೆಟ್ಟಿಯವರು ಇನ್ನೂ ಹೆಚ್ಚಿನ ಸಾಧನೆಗಳನ್ನು ಮಾಡಲಿ ಎಂದು ಹಾರೈಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಅತಿಥಿಗಳು "ರಂಗಭೂಮಿಯು ಯಾವಾಗಲೂ ನಿರಂತರವಾಗಿ ಹರಿಯುವ ನದಿಯಂತೆ ಇರಬೇಕು. ತಟಸ್ಥವಾಗಕೂಡದು. ಅದರಿಂದ ಸಮಾಜವನ್ನು ತಿದ್ದಬಹುದು. ಮಾಸ್ಟರ್ ಹಿರಣ್ಯಯ್ಯರಂತಹ ಹಿರಿಯ ರಂಗ ಕಲಾವಿದರು ಸಮಾಜದ ಅಂಕುಡೊಂಕುಗಳನ್ನು ನಿರ್ಭೀತಿಯಿಂದ ತಿದ್ದಲು ಪ್ರಯತ್ನಿಸಿದರೂ, ಹಲವಾರು ಪ್ರಕರಣಗಳನ್ನು ಎದುರಿಸಿ, ಇಳಿ ವಯಸ್ಸಿನಲ್ಲಿ ನ್ಯಾಯಾಲಯಕ್ಕೆ ಅಲೆದಾಡಬೇಕಾಯಿತು. ಆದರೂ ಅವರು ನೀಡಿದ್ದ ಸಂದೇಶಗಳು ಸಮಾಜವನ್ನು ತಲುಪಿತ್ತು. ರೋಟರಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಇರುವುದರಿಂದ ತಾನು ರೋಟರಿಯೆಡೆಗೆ ಆಕರ್ಷಿತನಾದೆ. ಅದರಲ್ಲಿರುವ ಸ್ಪರ್ಧೆಗಳು ನನ್ನನ್ನು ನಿಮ್ಮೊಡನೆ ಸೆಳೆದುಕೊಂಡು ನಮ್ಮೊಳಗೆ ಹೊಸ ಬಾಂಧವ್ಯವನ್ನು ಬೆಸೆದು ಬಿಟ್ಟಿದೆ. ಅಭ್ಯಾಸದ ಸಮಯದಲ್ಲಿ, ನಿಮ್ಮ ಕ್ಲಬ್ಬಿನಲ್ಲಿಯೂ ಉತ್ತಮ ರಂಗಕಲೆಯ ಪ್ರತಿಭೆಗಳಿರುವುದನ್ನು ಗಮನಿಸಿದ್ದೇನೆ. ಮುಂದಿನ ದಿನಗಳಲ್ಲಿ ನೀವು ಸಮರ್ಪಣಾ ಭಾವದಿಂದ ತಂಡವಾಗಿ ಪ್ರಯತ್ನಿಸಿದ್ದಲ್ಲಿ ಖಂಡಿತವಾಗಿ Dist.ನಲ್ಲಿ ಪ್ರಥಮ ಸ್ಥಾನಿಯಾಗಬಹುದೆಂದು ಮೆಚ್ಚುಗೆಯ ಮಾತುಗಳನ್ನಾಡಿದರು. ಗಾಂಧಿ ಮತ್ತು ಪೊಲೀಸ್ ಪಾತ್ರಧಾರಿಗಳು ಹಾಗೂ ರೊ. ರಮಾನಂದ ಕಾರಂತರವರು ಮನೋಜ್ಞವಾಗಿ ಅಭಿನಯಿಸಿದರು ಎಂದು "ಮಾತಿನ ಪ್ರಶಸ್ತಿ"ಯನ್ನು ನೀಡಿದರು.

ನಂತರ ಮಾತನಾಡಿದ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಕಳೆದ ಹಲವಾರು ವರ್ಷಗಳ ನಂತರ"ಪ್ರಹಸನ" ವಿಭಾಗದಲ್ಲಿ ವಲಯ ಮಟ್ಟದಲ್ಲಿ ಒಂದು ಪ್ರಶಸ್ತಿಯನ್ನು ಪಡೆಯಲು ರೊ. ಡಾ. ಉಮೇಶ್ ಪುತ್ರನ್‌ರವರು Script ರಚಿಸಿ, ದೇಣಿಗೆ ಹಾಗೂ 20 ದಿನಗಳ ಕಾಲ ನಿರಂತರ ಪ್ರೋತ್ಸಾಹವನ್ನು ನೀಡಿದ್ದು ಮತ್ತು ನಿರ್ದೇಶಕ ರಾಮ್ ಶೆಟ್ಟಿಯವರ ಕಠಿಣ ಪರಿಶ್ರಮಕ್ಕೆ ನಮ್ಮ ಸದಸ್ಯರು ಸ್ಪಂದಿಸಿದುದರಿಂದ ನಾವು ಯಶಸ್ಸನ್ನು ಗಳಿಸಲು ಸಾಧ್ಯವಾಯಿತು ಎಂದರು. ತಾಂತ್ರಿಕ ಕಾರಣಗಳಿಂದ ನಾವು ವಲಯ ಮಟ್ಟದಲ್ಲೇ ನಿರ್ಗಮಿಸಿದರೂ, ತೀರ್ಗಡೆಗೊಂಡಿದ್ದಲ್ಲಿ Dist.ನಲ್ಲೂ ಯಶಸ್ಸು ಗಳಿಸಲು ಸಾಧ್ಯವಾಗಬಹುದಿತ್ತು ಎಂದು ನನಗೆ ಅನ್ನಿಸಿತು ಎಂದರು. ಮುಂದಿನ ವಾರದ ನಮ್ಮ ಸಾಪ್ತಾಹಿಕ ಸಭೆಯು Family Get together ಆಗಿ ನಿಯೋಜಿಸಿರುವುದರಿಂದ ಅದನ್ನು ಗುರುವಾರದ ಬದಲು ಎಲ್ಲರಿಗೂ ಅನುಕೂಲವಾಗಲು ತಾ. 24ರ ಭಾನುವಾರ ಸಾಯಂಕಾಲ ಹೊಸಂಗಡಿಯ 'ಚಾತ್ರ ಎಸ್ಟೇಟ್'ನಲ್ಲಿ ನಡೆಸಲು ಪಿಡಿಜಿ. ರೊ. ಸದಾನಂದ ಚಾತ್ರರವರು ಒಪ್ಪಿಗೆಯನ್ನು ನೀಡಿರುತ್ತಾರೆ. ಅಂದು ನಮ್ಮ ಕ್ಲಬ್ಬಿನ ಆ್ಯನ್ಸ್ ಮತ್ತು ಆ್ಯನೆಟ್ಸ್‌ರವರ Talents Showವನ್ನು ನಡೆಸುವುದರಿಂದ ಹಾಗೂ cultural competition ನ ತುಣುಕುಗಳನ್ನು ಪ್ರದರ್ಶಿಸಲು ಆಯೋಜಿಸಿರುವುದರಿಂದ ಎಲ್ಲಾ ಸದಸ್ಯರೂ ಕುಟುಂಬ ಸಮೇತರಾಗಿ ಈ Rural outingನಲ್ಲಿ ಭಾಗವಹಿಸಿ ಎಂದು ಕೋರಿದರು. ನಂತರ ನಮ್ಮ ಪ್ರಹಸನ "ಉಪ್ಪಿನ ಸತ್ಯಾಗ್ರಹ"ದ ನಿರ್ದೇಶಕರಾದ ರೊ. ರಾಮ್ ಶೆಟ್ಟಿಯವರನ್ನು ನಮ್ಮ ಎಲ್ಲಾ ಸದಸ್ಯರ ಸಮ್ಮುಖದಲ್ಲಿ ಅಭಿನಂದಿಸಿ, ಶಾಲುಹೊದಿಸಿ, ಸ್ಮರಣಿಕೆಯನ್ನು ನೀಡಿ ಗೌರವಿಸಲಾಯಿತು.

ಕೊನೆಯಲ್ಲಿ ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ನಗೆಹನಿಯನ್ನು ಸಿಡಿಸಿದರು. ರೊ. ಡಾ. ಉಮೇಶ್ ಪುತ್ರನ್‌ರವರು ಲಕ್ಕಿ ರೋಟೇರಿಯನ್ ಆಗಿ ಆಯ್ಕೆಯಾದರು. ಅತಿಥಿಗಳಿಗೆ ಹಾಗೂ ಆಗಮಿಸಿದ ಎಲ್ಲಾ ಸದಸ್ಯರಿಗೆ ರೊ. ದೋ.ಮ. ಚಂದ್ರಶೇಖರ್‌ರವರು ಧನ್ಯವಾದ ಸಮರ್ಪಿಸಿದ ನಂತರ ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಕೊನೆಗೊಳಿಸಲಾಯಿತು.



ಉಡುಪಿ ವಿಶ್ವ ಸಂಸ್ಕೃತಿ ಪ್ರತಿಷ್ಠಾನ ಹಾಗೂ ಮಲಬಾರ್ ಗೋಲ್ಡ್ & ಡೈಮಂಡ್ ಉಡುಪಿ ಶಾಖೆಯ ವತಿಯಿಂದ ನೀಡಲ್ಪಡುವ "ಮಲಬಾರ್ ವಿಶ್ವ ಸಾಹಿತ್ಯ ಪುರಸ್ಕಾರ"ಕ್ಕೆ ಭಾಜನರಾದ ನಮ್ಮ ಕ್ಲಬ್ಬಿನ ರೊ. ಡಾ. ಉಮೇಶ್ ಪುತ್ರನ್‌ರವರಿಗೆ ಕ್ಲಬಿನ ಪರವಾಗಿ ಅಭಿನಂದನೆಗಳು.

## Rotary Information

### Around The Wheel

TRF Chair Mark Maloney has set five clear goals this year:

- Lead by example: Every Rotarian should contribute to the Annual Fund and Endowment Fund.
- Increase the donor base: Encourage more Rotarians to give and amplify our impact.
- Support polio eradication: Continue our unwavering commitment to eradicating polio.
- Promote the Paul Harris Society: Inspire more members to join and contribute regularly.
- Organise Million Dollar events: Raise awareness and funds for the Endowment Fund through significant fundraising events.

Finally, we have a pledge to fulfil this year: we must ensure that our Endowment Fund reaches $2.025 billion by June 2025. Currently, we are $270 million short of this target.

### ಕಳೆದ ವಾರದ ಚಿಂತನೆ

ನಾನು ಒಬ್ಬನೇ ಇದ್ದಲ್ಲಿ ಸುಮ್ಮನೆ ಕೂರಬೇಕು.
ಆದರೆ ಜತೆಯಾದರೆ ನಾವು ಮಾತನಾಡಿಕೊಳ್ಳಬಹುದು.
ನಾನು ಒಬ್ಬನೇ ಇದ್ದಲ್ಲಿ ಮಂದಹಾಸ ಬೀರಬಹುದು.
ಆದರೆ ಜತೆಯಾದರೆ ನಾವು ನಗಬಹುದು.
ನಾನು ಒಬ್ಬನೇ ಇದ್ದಲ್ಲಿ ನಾನು ಸಂತಸಪಡಬಹುದು.
ಆದರೆ ಜತೆಯಾದರೆ ನಾವು ಸಂಭ್ರಮಿಸಬಹುದು.
ಆದುದರಿಂದ ಒಳ್ಳೆಯ ಸ್ನೇಹಿತರಿಂದ ಜೊತೆಗೂಡುವಿಕೆಯಲ್ಲಿರುವುದೇ ಸಂತಸ, ಸಂತೃಪ್ತಿ ಮತ್ತು ಸಂಭ್ರಮ

**ನೀಡಿದವರು : ರೊ. ಲೋಯ್ ಕರ್ವಲ್ಲೋ**



